# **ಕಾರ್ಮಿಕ ನ್ಯಾಯಾಲಯ, ಮೈಸೂರು.**

**IID**:03/2025

ಡಬ್ಲ್ಯೂ.ಡಬ್ಲ್ಯೂ-7

**ದಿನಾಂಕ 13.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಮುಂದುವರೆದ ಪಾಟೀ ಸವಾಲುಃ 2 ನೇ ಪಕ್ಷಗಾರರ ಪರ ಶ್ರೀ.ಹೆಚ್.ಕೆ.ಜೆ. ವಕೀಲರಿಂದಃ**

ನಾನು ನಂಜನಗೂಡು ಸರ್ವೆ ಇಲಾಖೆಯಲ್ಲಿ 2017 ರಿಂದ ಕೆಲಸ ಮಾಡುತ್ತಿರುತ್ತೇನೆ. ನಮ್ಮ ಮೂಲ ಮಾಲೀಕರು ಎ.ಡಿ.ಎಲ್.ಆರ್. ಆಗಿರುತ್ತಾರೆ ಎಂದರೆ ಸಾಕ್ಷಿ ಡಿ.ಡಿ.ಎಲ್.ಆರ್. ರವರು ಆದೇಶ ಮಾಡುತ್ತಾರೆ ಎನ್ನುತ್ತಾರೆ. ನಮಗೆ ವೇತನ ಡಿ.ಡಿ.ಎಲ್.ಆರ್. ರವರ ಮುಖಾಂತ ಬರುತ್ತದೆ ಎಂದರೆ ಸಾಕ್ಷಿ ಏಜೆನ್ಸಿ ಹಾಗೂ ಡಿ.ಡಿ.ಎಲ್.ಆರ್. ಇಬ್ಬರ ಮುಖಾಂತರ ಬರುತ್ತದೆ ಎನ್ನುತ್ತಾರೆ. ನಾವು ಆರ್.ಟಿ.ಐ.ನಲ್ಲಿ ಅರ್ಜಿ ಸಲ್ಲಿಸಿ ಶಿಕ್ಷಣದ ವಿದ್ಯಾರ್ಹತೆ ಬಗ್ಗೆ ದಾಖಲೆ ಕೇಳಿದ್ದೇವು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಾವು ಮೂಲ ಮಾಲೀಕರಾದ ಡಿ.ಡಿ.ಎಲ್.ಆರ್. ರವರ ಮುಂದೆ ಕೆಲಸದಿಂದ ತೆಗೆದು ಹಾಕಿರುವ ಬಗ್ಗೆ ಮನವಿ ಪತ್ರ ನೀಡಿದ್ದೀರ ಎಂದರೆ ಸಾಕ್ಷಿ ಆಯುಕ್ತರಿಗೆ ಅರ್ಜಿ ನೀಡಿದ್ದೇವು ಎನ್ನುತ್ತಾರೆ. ಸದರಿ ಅರ್ಜಿಯನ್ನು ನಾನು ನ್ಯಾಯಾಲಯದ ಮುಂದೆ ಹಾಜರು ಮಾಡಿರುತ್ತೇನೆ. ನಿ.ಡಬ್ಲ್ಯೂ-3 ರ ದಾಖಲೆಯನ್ನು ಎ.ಡಿ.ಎಲ್.ಆರ್. ರವರ ಕಚೇರಿಯಿಂದ ನೀಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. 2 ನೇ ಪಕ್ಷಗಾರರ ಸಂಸ್ಥೆಯಿಂದ ನಮಗೆ ಯಾವುದೇ ಗುರುತಿನ ಚೀಟಿ ಕೊಟ್ಟಿಲ್ಲ.

ನನ್ನನ್ನು ಕೆಲಸದಿಂದ ತೆಗೆದು ಹಾಕಿರುತ್ತಾರೆ ಎಂದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP.25369/2025 ಅರ್ಜಿ ದಾಖಲು ಮಾಡಿದ್ದೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ಡಿ.ಡಿ.ಎಲ್.ಆರ್., ಎ.ಡಿ.ಎಲ್.ಆರ್. ಹಾಗೂ ಸರ್ಕಾರವನ್ನು ಪಕ್ಷಗಾರರನ್ನಾಗಿ ಸೇರಪಡೆ ಮಾಡಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ.

ಮೂಲ ಮಾಲೀಕರನ್ನು ಸೇರಪಡೆ ಮಾಡಿಲ್ಲದೆ ಇದ್ದ ಕಾರಣ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನಮ್ಮ ಅರ್ಜಿ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿ.ಡಬ್ಲ್ಯೂ-2 ರ ದಾಖಲೆಯನ್ನು 2 ನೇ ಪಕ್ಷಗಾರರು ಕೊಟ್ಟಿರುತ್ತಾರೆ. ಸದರಿ ದಾಖಲೆಯನ್ನು ಗುತ್ತಿ ಬಸವೇಶ್ವರ ಮ್ಯಾನ್ ಪವರ್ ಏಜೆನ್ಸಿರವರು ನೀಡಿರುತ್ತಾರೆ ಎಂದರೆ ಸರಿ. ಈ ಪ್ರಕರಣದಲ್ಲಿ ಡಿ.ಡಿ.ಎಲ್.ಆರ್. ಹಾಗೂ ಎ.ಡಿ.ಎಲ್.ಆರ್. ರವರನ್ನು ಸೇರಿಸಲು ನನಗೆ ತೊಂದರೆ ಇರಲಿಲ್ಲ. ನನಗೆ ಅರ್ಹತೆ ಇಲ್ಲದೇ ಇದ್ದಿದ್ದ ಕಾರಣ ನನಗೆ ಕೆಲಸದಿಂದ ತೆಗೆದು ಹಾಕಿರುತ್ತಾರೆ, 2 ನೇ ಪಕ್ಷಗಾರರಿಗೆ ತೊಂದರೆ ನೀಡುವ ಉದ್ದೇಶದಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮಲಿ 10 ನೇ ತರಗತಿ ತೇರ್ಗಡೆ ಹೊಂದಿರುವ ಪಕ್ಷಗಾರರ ಅಂಕ ಪಟ್ಟಿಯನ್ನು ತಂದು ಕೊಡುತ್ತೇನೆ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**